ಆದರೆ, ಧಾರವಾಡದ ಕನ್ನಡಪೀಠಸ್ಥರು ಅದನ್ನು ದುರ್ಲಕ್ಷಿಸಿದರು.

ನಾಡಿನ ಬಹುತೇಕ ಪ್ರತಿಷ್ಠಿತ ಸಾಹಿತ್ಯ ಸಂಸ್ಥೆಗಳಿಂದ ಸಿಗಬೇಕಾಗಿದ್ದುದನ್ನು, ಪಡೆಯಬೇಕಾಗಿದ್ದುದನ್ನು ಸಾಧನೆ, ಪರಿಶ್ರಮ, ಹಕ್ಕಿನಿಂದ ತನ್ನದಾಗಿಸಿಕೊಂಡ. ಕೊನೆಕೊನೆಗೆ ಯಾರ ಬಗೆಗೂ ಆಕ್ಷೇಪಣೆಯ ಸ್ವರ ಎತ್ತಲಿಲ್ಲ. ತನಗೆ ತಿಳಿದಂತೆ 'ಸಾಹಿತ್ಯ ಸಂಭ್ರಮ' ಮಾಡುತ್ತ ಮಾಡುತ್ತ, ಸ್ವಂತದ ಆರೋಗ್ಯದ ಬಗ್ಗೆ ಮೈಮರೆತ. ಮಧುಮೇಹ, ರಕ್ತದೊತ್ತಡದ ಬಗ್ಗೆ ವೈದ್ಯರ ಸಲಹೆಗಳನ್ನು ಅಲಕ್ಷಿಸಿದ. 'ಈಚೆಗೆ ನನಗೂ ಸ್ವಲ್ಪ ಜೋಲಿ ಹೋದಂಗ ಆಗತೈತಿ, ಕೋಲು ಹಿಡಕೊಂಡು ನಡೀತೇನಿ' ಅಂದೆ. "ಛೆ, ಅದೆಲ್ಲಾ ನನಗ ಆಗೂದಿಲ್ಲ ತಗಿ. ನನಗ ಸಂಜಿ ಆದ ಮ್ಯಾಲಷ್ಟ ಜೋಲಿ ಹೋಗತೈತಿ, ಅಷ್ಟು ಹೊತ್ತಿನ ಒಳಗಾಗಿ ಮನಿಗೆ ಬಂದ ಬಿಡತೇನಿ" ಅಂದ. ತನ್ನ ಅನಾರೋಗ್ಯಕ್ಕೆ ಅವನು ಕಂಡುಕೊಂಡಿದ್ದ ಮಾರ್ಗ ಇದು.

ಹೇಮಾ ಆಯೋಜಿಸಿದ 'ಅನನ್ಯ ಮಹಿಳೆ' ಕಾರ್ಯಕ್ರಮಕ್ಕೆ ಬಂದಿದ್ದ ಅಪರ್ಣಾ, ಜೊತೆಗೆ ನಾಗರಾಜ ವಸ್ತಾರೆ ನಮ್ಮ ಮನೆಯಲ್ಲಿಯೇ ಉಳಿದಿದ್ದರು. ಅವರಿಗೆ ಗಿರಡ್ಡಿಯನ್ನು ಭೆಟ್ಟಿ ಮಾಡಿಸಲು ಅವನ ಮನೆಗೆ ಹೋಗಿದ್ದೆವು. ಆವತ್ತು ಅವರಿಗೆ ತನ್ನ ಅಗ್ಗಳಿಕೆಯ ಅಟ್ಟದ ಗ್ರಂಥಸಂಗ್ರಹವನ್ನು ತೋರಿಸಿ ಸಂಭ್ರಮಿಸಿದ. ಮುಂದೆ ಕೆಲ ದಿನಗಳಲ್ಲಿ ಗೆಳೆಯನೊಬ್ಬ ಕೊಟ್ಟ ರಾತ್ರಿ 'ಪಾರ್ಟಿ'ಯಲ್ಲಿ ಕೂಡಿದ್ದೆವು. ಅಂದು ಬಹಳಷ್ಟು ಸಿಗರೇಟು ಸೇದಿದ. 'ಸೇದುವುದು ಬಿಟ್ಟೇನೆಂತ ಹೇಳಿದ್ದಿಯಲ್ಲ?' ಕೇಳಿದೆ. "ಬಿಟ್ಟಿಲ್ಲ, ಕಡಿಮಿ ಮಾಡೇನಿ" ಅಂದ. 'ಮತ್ತ ಇವತ್ತ?' "ಇವತ್ತ ಸ್ವಲ್ಪ ಹಂಗ...!" ಎನ್ನುತ್ತ ಗ್ಲಾಸ್ ಎತ್ತಿಕೊಂಡ. ಅದಾದ ಒಂದು ವಾರದ ಅನಂತರ ನನ್ನ 'ಗಿರಿಜವ್ವನ ಮಗ' ಪುಸ್ತಕದ ಬಿಡುಗಡೆಗೆ

